ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 13-20
Bi-Monthly, Peer-Reviewed, Open Access, Indexed Journal

I S S N: 2583-3510
S I R D F
J O U R N A L S
editor@srujani.in
www.srujani.in

# ಮಧ್ಯ ಕರ್ನಾಟಕದ ಕಾರ್ಮಿಕರ ಸಂಘಟನೆ, ನಿಧಿ ಸಂಗ್ರಹ ಮತ್ತು ಪ್ರತಿಭಟನೆಯ ವಿಧಾನಗಳು

**ಡಾ. ಆರ್.ಎಸ್. ಉಮೇಶ**
ಇತಿಹಾಸ ಸಹಾಯಕ ಪ್ರಾಧ್ಯಾಪಕ, ಬಾಪೂಜಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ

***Abstract:***
*ಈ ಲೇಖನವು ಮಧ್ಯ ಕರ್ನಾಟಕದ ಕಾರ್ಮಿಕರ ಸಂಘಟನೆ, ನಿಧಿ ಸಂಗ್ರಹಣೆ ಹಾಗೂ ಪ್ರತಿಭಟನೆಯ ವಿವಿಧ ವಿಧಾನಗಳನ್ನು ಐತಿಹಾಸಿಕ ಮತ್ತು ಸಾಮಾಜಿಕ ದೃಷ್ಟಿಕೋನದಿಂದ ವಿಶ್ಲೇಷಿಸುತ್ತದೆ. ಕಾರ್ಮಿಕ ಸಂಘಟನೆಗಳು ಕಾರ್ಮಿಕರ ಹಕ್ಕುಗಳ ರಕ್ಷಣೆ, ವೇತನ ಹೆಚ್ಚಳ ಹಾಗೂ ಸಾಮಾಜಿಕ ಭದ್ರತೆಗಾಗಿ ಹೇಗೆ ರೂಪುಗೊಂಡವು ಎಂಬುದನ್ನು ಲೇಖನ ಚರ್ಚಿಸುತ್ತದೆ. ಸಂಘಟನೆಗಳ ಆರ್ಥಿಕ ಸ್ಥಿರತೆಗೆ ಸದಸ್ಯತ್ವ ಶುಲ್ಕ, ದೇಣಿಗೆ, ಸಹಾಯಧನ ಹಾಗೂ ಸಾರ್ವಜನಿಕ ಬೆಂಬಲದ ಮೂಲಕ ನಿಧಿ ಸಂಗ್ರಹಿಸಿದ ವಿಧಾನಗಳನ್ನು ವಿವರಿಸುತ್ತದೆ. ಅಲ್ಲದೆ ಮುಷ್ಕರ, ಧರಣಿ, ಮೆರವಣಿಗೆ, ಮನವಿ ಸಲ್ಲಿಕೆ ಹಾಗೂ ಸಾರ್ವಜನಿಕ ಜಾಗೃತಿ ಅಭಿಯಾನಗಳಂತಹ ಪ್ರತಿಭಟನಾ ರೂಪಗಳನ್ನು ವಿಶ್ಲೇಷಿಸುತ್ತದೆ. ಈ ಹೋರಾಟಗಳು ಕಾರ್ಮಿಕ ಚಳುವಳಿಯ ಬಲವರ್ಧನೆ ಮತ್ತು ಕಾರ್ಮಿಕರ ಹಕ್ಕುಗಳ ಸಾಧನೆಯಲ್ಲಿ ವಹಿಸಿದ ಪಾತ್ರವನ್ನು ಲೇಖನ ಮೌಲ್ಯಮಾಪನ ಮಾಡುತ್ತದೆ. ಒಟ್ಟಾರೆಯಾಗಿ, ಮಧ್ಯ ಕರ್ನಾಟಕದ ಕಾರ್ಮಿಕ ಚಳುವಳಿಯ ಸಂಘಟನಾ ಶಕ್ತಿ ಮತ್ತು ಸಾಮಾಜಿಕ ಪರಿಣಾಮಗಳನ್ನು ಈ ಅಧ್ಯಯನ ಬೆಳಕು ಚೆಲ್ಲುತ್ತದೆ.*

***Keywords:*** *ಕಾರ್ಮಿಕ ಸಂಘಟನೆ, ಮಧ್ಯ ಕರ್ನಾಟಕ, ನಿಧಿ ಸಂಗ್ರಹಣೆ, ಕಾರ್ಮಿಕ ಪ್ರತಿಭಟನೆ, ಕಾರ್ಮಿಕ ಚಳುವಳಿ*

## ಪೀಠಿಕೆ

ಮಧ್ಯ ಕರ್ನಾಟಕದ ಕಾರ್ಮಿಕ ಚಳುವಳಿ ಪ್ರಾಂತ್ಯದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದೆ. ಕೈಗಾರಿಕೆ, ಕೃಷಿ, ಕಟ್ಟಡ ನಿರ್ಮಾಣ, ಸಾರಿಗೆ ಮತ್ತು ಇತರ ಕಾರ್ಮಿಕ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರು ತಮ್ಮ ಹಕ್ಕುಗಳ ರಕ್ಷಣೆಗೆ ಸಂಘಟಿತ ಹೋರಾಟ ನಡೆಸಿದ್ದಾರೆ. ಈ ಹೋರಾಟಗಳು ವೇತನ ಹೆಚ್ಚಳ, ಕೆಲಸದ ಭದ್ರತೆ, ಕೆಲಸದ ಸಮಯದ ನಿಯಂತ್ರಣ ಮತ್ತು ಸಾಮಾಜಿಕ ಭದ್ರತೆಗಾಗಿ ಪ್ರಮುಖವಾಗಿ ಉದ್ಭವಿಸಿವೆ. ಕಾರ್ಮಿಕ ಸಂಘಟನೆಗಳು ಸದಸ್ಯತ್ವ ವೃದ್ಧಿ, ಸಂಘಟನಾ ಶಕ್ತಿ ಮತ್ತು ಆರ್ಥಿಕ ಸ್ಥಿರತೆಯನ್ನು ಕಾಯ್ದುಕೊಳ್ಳಲು ವಿವಿಧ ನಿಧಿ ಸಂಗ್ರಹ ವಿಧಾನಗಳನ್ನು ಅನುಸರಿಸಿವೆ. ಸದಸ್ಯತ್ವ ಶುಲ್ಕ, ದೇಣಿಗೆ, ಸಹಾಯಧನ ಮತ್ತು ಸಾರ್ವಜನಿಕ ಬೆಂಬಲದ ಮೂಲಕ ಸಂಘಟನೆಗಳು ತಮ್ಮ ಚಟುವಟಿಕೆಗಳನ್ನು ಮುಂದುವರಿಸಿವೆ. ತಮ್ಮ ಬೇಡಿಕೆಗಳನ್ನು ಸರ್ಕಾರ, ಉದ್ಯಮಿಗಳು ಮತ್ತು ಸಮಾಜದ ಗಮನಕ್ಕೆ ತರಲು ಕಾರ್ಮಿಕರು ಮುಷ್ಕರ, ಧರಣಿ, ಮೆರವಣಿಗೆ, ಮನವಿ ಸಲ್ಲಿಕೆ ಮತ್ತು ಜಾಗೃತಿ ಅಭಿಯಾನಗಳಂತಹ ಪ್ರತಿಭಟನಾ ವಿಧಾನಗಳನ್ನು

***Please cite this article as:*** ಉಮೇಶ, ಆರ್.ಎಸ್. (2026). ಮಧ್ಯ ಕರ್ನಾಟಕದ ಕಾರ್ಮಿಕರ ಸಂಘಟನೆ, ನಿಧಿ ಸಂಗ್ರಹ ಮತ್ತು ಪ್ರತಿಭಟನೆಯ ವಿಧಾನಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 5(3), 13–20

ಬಳಸಿದ್ದಾರೆ. ಆದ್ದರಿಂದ ಮಧ್ಯ ಕರ್ನಾಟಕದ ಕಾರ್ಮಿಕರ ಸಂಘಟನೆ, ನಿಧಿ ಸಂಗ್ರಹಣೆ ಮತ್ತು ಪ್ರತಿಭಟನೆಯ ವಿಧಾನಗಳನ್ನು ಅಧ್ಯಯನ ಮಾಡುವುದು ಕಾರ್ಮಿಕ ಚಳುವಳಿಯ ಸ್ವರೂಪ ಮತ್ತು ಅದರ ಸಾಮಾಜಿಕ ಪರಿಣಾಮಗಳನ್ನು ಅರ್ಥಮಾಡಿಕೊಳ್ಳಲು ಅಗತ್ಯವಾಗಿದೆ.

**ಕರ್ನಾಟಕದಲ್ಲಿ ಕಾರ್ಮಿಕರ ಸಂಘಟನೆಯ ಉಗಮ ಮತ್ತು ಬೆಳವಣಿಗೆ**

ಕರ್ನಾಟಕದಲ್ಲಿ ಕಾರ್ಮಿಕರ ಸಂಘಟನೆ ಮತ್ತು ಚಳವಳಿಗಳು 1920ರ ನಂತರದ ಕಾಲಘಟ್ಟದಲ್ಲಿ ಕಂಡು ಬರುತ್ತದೆ. 1920ರ ನಂತರ ಕಾರ್ಮಿಕರಲ್ಲಿ ಜಾಗೃತಿ ಮೂಡಿದರೂ ತಮ್ಮ ಮೇಲಿನ ದಬ್ಬಾಳಿಕೆ ಶೋಷಣೆಯ ವಿರುದ್ಧ ಒಟ್ಟಾಗಿ ಹೋರಾಡುವ ಮನೋಭಾವನೆಗಳು ನಿಧಾನವಾಗಿ ಗರಿಗೆದರಿದವು. ಅಸಂಘಟಿತರಾಗಿದ್ದ ಕಾರ್ಮಿಕರು, ತಮ್ಮ ಹಕ್ಕುಗಳ ಬಗ್ಗೆ ಯಾವುದೇ ಕಾಯಿದೆ ಕಾನೂನುಗಳು ಇಲ್ಲದಂತಹ ಪರಿಸ್ಥಿತಿಯಲ್ಲಿ ಬದುಕುತ್ತಿದ್ದರು. 1926ರಲ್ಲಿ ಕೇಂದ್ರ ಜಾರಿಗೆ ತಂದ ಕಾರ್ಮಿಕರ ಸಂಘಟನೆಗಳ ಕಾಯಿದೆ 1941ರವರೆಗೆ ಮೈಸೂರು ರಾಜ್ಯಕ್ಕೆ ಅನ್ವಯವಾಗಿರಲಿಲ್ಲ. ಅಲ್ಲಿಯವರೆಗೆ ಕಾರ್ಮಿಕರ ಸಂಘಟನೆಗಳು ಸೇವ ಸಂಸ್ಥೆಗಳಾಗಿ ನೋಂದಣಿಯಾಗಬೇಕಾಗಿತ್ತು. ಕಾರ್ಮಿಕರ ಸಂಘಟನೆಗಳ ಮುಖಂಡರುಗಳಿಗೆ ಮಾಲೀಕರು ಮತ್ತು ಪೊಲೀಸರಿಂದ ಕಿರುಕುಳಗಳು ಸಾಮಾನ್ಯವಾಗಿದ್ದು ರಕ್ಷಣೆ ಇರಲಿಲ್ಲ.

ಮಹಾಯುದ್ಧಗಳ ಕಾಲದಲ್ಲಿ ಕಾರ್ಮಿಕರು ಸಂಬಳ ಹೆಚ್ಚಳಕ್ಕಾಗಿ ಹೋರಾಡುವುದು ಮತ್ತು ಕಾರ್ಮಿಕ ಸಂಘಟನೆಗಳಿಗೆ ಕಾನೂನು ಮಾನ್ಯತೆ ಪಡೆಯುವುದಾಗಿತ್ತು. ಕಾರ್ಮಿಕರಿಗೆ ತಮ್ಮ ವೇತನದ ಬಗ್ಗೆ ಇದ್ದ ಅಸಮಾಧಾನಗಳು ಕಾರ್ಮಿಕರ ಸಂಘಟನೆಗಳಿಗೆ ಚಾಲನೆ ನೀಡಿತು. ಕರ್ನಾಟಕ ರಾಜ್ಯದಲ್ಲಿ ಕಾರ್ಮಿಕರ ಮುಷ್ಕರ 1920ರಲ್ಲಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಮುಖಂಡ ಕೆ.ಟಿ. ಭಾಷ್ಯಂ ಅವರ ನೇತೃತ್ವದಲ್ಲಿ ಬೋನಸ್ ಸಮಸ್ಯೆಯ ಕಾರಣದಿಂದಲೇ ನಡೆಯಿತು. ಅದರಲ್ಲಿ ಜಯವು ಲಭಿಸಿತು. ಇದರಿಂದಾಗಿ 1920ರಲ್ಲಿ ಬಿನ್ನಿಮಿಲ್ ವರ್ಕರ್ಸ್ ಕೌನ್ಸಿಲ್ ಪ್ರಾರಂಭವಾಯಿತು. ತದನಂತರ ಮಿನರ್ವಮಿಲ್ ಹಾಗೂ ಕೃಷ್ಣ ಮಿಲ್‌ಗಳಲ್ಲಿ ಕಾರ್ಮಿಕರ ಸಂಘಟನೆಯಾಯಿತು. ಮುಂದೆ ಕೈಗಾರಿಕೆಗಳ ಉತ್ಪಾದನೆ ಮತ್ತು ಲಾಭ ಕಡಿಮೆಯಾದಾಗ ಮಾಲೀಕರು ಕಾರ್ಮಿಕರನ್ನು ಕೆಲಸದಿಂದ ವಜಾಮಾಡಿದರು. ಅದರ ವಿರುದ್ಧ ಕಾರ್ಮಿಕರು ನಡೆಸಿದ ಬೇಡಿಕೆ ಸಹಿತ ಹೋರಾಟಗಳು ವಿಫಲವಾದವು. ಆಗ ಕಾರ್ಮಿಕರು ಜಾಗೃತರಾಗಿ ವಿವಿಧ ಕೈಗಾರಿಕೋದ್ಯಮಗಳ ಕಾರ್ಮಿಕರೆಲ್ಲರಲ್ಲಿ ಕಾರ್ಮಿಕ ಸಂಘಟನೆಗಳ ಒಕ್ಕೂಟವನ್ನು ರಚಿಸುವ ಬಗ್ಗೆ ಚಿಂತಿಸತೊಡಗಿದರು. ಕೈಗಾರಿಕೆಗಳು ಬೆಳೆದ ಪ್ರಮಾಣದಲ್ಲಿ ಕಾರ್ಮಿಕರ ಸಂಘಟನೆ ಆರಂಭದಲ್ಲಿ ಬೆಳೆಯಲಿಲ್ಲ. 1929ರಲ್ಲಿ ಬ್ರಿಟಿಷ್ ಇಂಡಿಯಾದಲ್ಲಿ ಟ್ರೇಡ್ ಯೂನಿಯನ್ ಆಕ್ಟ್ ಜಾರಿಗೆ ಬಂದಿತು. ಆ ಆಕ್ಟ್‌ನಿಂದ ಚಳವಳಿಗಳು ನ್ಯಾಯಬದ್ಧವಾದವು. ಆದರೆ ಮೈಸೂರು ಸಂಸ್ಥಾನದಲ್ಲಿ 1941ರವರೆಗೆ ಅಂಥದೊಂದು ಶಾಸನವನ್ನು ಜಾರಿಗೆ ತರಲು ಆಡಳಿತವು ನಿರಾಕರಿಸಿತು. ಇದೇ ವೇಳೆ ಮೈಸೂರು ಸಂಸ್ಥಾನದ ಬೆಂಗಳೂರು, ಕೋಲಾರ, ದಾವಣಗೆರೆ, ಭದ್ರಾವತಿ ಮುಂತಾದ ಕಡೆ ಕೈಗಾರಿಕೆಗಳು ಬೆಳೆದು ಕಾರ್ಮಿಕರ ಸಂಖ್ಯೆಯು ಹೆಚ್ಚಾಯಿತು. ಅವರ ಮೇಲೆ ಆಗುತ್ತಿದ್ದ ದಬ್ಬಾಳಿಕೆ ಶೋಷಣೆಯನ್ನು ಕಾರ್ಮಿಕರು ವಿರೋಧಿಸಿ ಸಂಘಟನೆಯನ್ನು ಕೈಗೊಳ್ಳಲು ಅನೇಕ ಅಡ್ಡಿ ಆತಂಕಗಳು ಎದುರಾದವು. ಕಾರ್ಮಿಕರ ಸಂಘಟನೆಗೆ ಪ್ರಯತ್ನಿಸಿದ ಆಗಿನ ರೈಲ್ವೆ ಕಾರ್ಮಿಕ ಒಕ್ಕೂಟದ ಮಹಾ ಕಾರ್ಯದರ್ಶಿಯಾಗಿದ್ದ ವಿವಿಗಿರಿಯವರನ್ನು ಸರ್ಕಾರ ಮೈಸೂರನ್ನು ಪ್ರವೇಶಿಸದಂತೆ ನಿರ್ಬಂಧ ಹೇರಿತು. ಕಾರ್ಮಿಕರ ಸಂಘಟನೆಗಾಗಿ 1938ರಲ್ಲಿ ಬಿನ್ನಿಮಿಲ್ಲಿನಲ್ಲಿ ನಡೆದ ಮುಷ್ಕರದಲ್ಲಿ ಕಾರ್ಮಿಕ ಮುಖಂಡರನ್ನು ಸರ್ಕಾರ ಬಂಧಿಸಿದಾಗ ಸಾವಿರಾರು ಕಾರ್ಮಿಕರು ಬೆಂಗಳೂರು ನಗರದಲ್ಲಿ

ಪ್ರತಿಭಟನೆಯನ್ನು ನಡೆಸಿದರು. ಕೆಲಸದಿಂದ ವಜಾ ಮಾಡಿದ ಕಾರ್ಮಿಕರನ್ನು ಪುನಃ ಸೇರಿಸಿಕೊಳ್ಳುವಂತೆ ಮಿನರ್ವ ಮಿಲ್ಲಿನ ಕಾರ್ಮಿಕರು ಮತ್ತು ಅದರಂತೆ ಬೇರೆ ಬೇರೆ ಮಿಲ್ಲುಗಳ ಕಾರ್ಮಿಕರು ತೀವ್ರವಾದ ಹೋರಾಟಗಳನ್ನು ಕೈಗೊಂಡು ಮುಷ್ಕರಗಳನ್ನು ನಡೆಸಿದರು. ಅಂತಿಮವಾಗಿ ಕಾರ್ಮಿಕರ ಪ್ರತಿಭಟನೆಗಳನ್ನು ತಡೆಯಲಾಗದೇ ಕಾರ್ಖಾನೆ ಆಡಳಿತ ಮಂಡಳಿಗಳು ಕಾರ್ಮಿಕರ ಬೇಡಿಕೆಗಳಿಗೆ ಸಮ್ಮತಿಸಬೇಕಾಯಿತು.

ಕಾರ್ಮಿಕರ ಸಂಘಟನೆಗಳಿಗೆ ಅವಕಾಶ ನೀಡುವಂತೆ ಬೇಡಿಕೆ ಇಟ್ಟು 1940ರಲ್ಲಿ ಬಿನ್ನಿಮಿಲ್ಲಿನಲ್ಲಿ ಬೃಹತ್ ಮುಷ್ಕರ ನಡೆಸಲಾಯಿತು. ಆಗ ಎಚ್ಚೆತ್ತ ಸರ್ಕಾರ ಒಂದು ಸಮಿತಿ ರಚಿಸಿ ಅದರ ಸಲಹೆಗಳ ಆಧಾರದ ಮೇಲೆ ಕಾರ್ಮಿಕ–ಮಾಲೀಕರ ನಡುವಿನ ವಿವಾದ ಪರಿಹಾರ ಹಾಗೂ ಒಪ್ಪಂದದ ವಿಧಗಳನ್ನೊಳಗೊಂಡ ಮೈಸೂರು ಕಾರ್ಮಿಕ (ತುರ್ತು ಪರಿಸ್ಥಿತಿ) ಕಾಯಿದೆಯನ್ನು ಸರ್ಕಾರ 1941ರಲ್ಲಿ ಜಾರಿಗೊಳಿಸಿತು. ಈ ಕಾಯಿದೆ ಮೊಟ್ಟಮೊದಲ ಬಾರಿಗೆ ಕಾರ್ಮಿಕ ಸಂಘಟನೆಗಳಿಗೆ ಕಾನೂನು ಮಾನ್ಯತೆ ನೀಡಿದ್ದೆ ಅಲ್ಲದೇ ಅವುಗಳಿಗೆ ನೋಂದಣಿಯ ಹಕ್ಕನ್ನೂ ನೀಡಿತು. ಪೋಲೀಸು ಅಥವಾ ಆಡಳಿತ ವರ್ಗಗಳ ಶೋಷಣೆಯ ಭಯವಿಲ್ಲದೆ ನ್ಯಾಯಯುತ ಹೋರಾಟ ನಡೆಸುವ ಅವಕಾಶವನ್ನು ಈ ಕಾಯಿದೆಯು ಕಾರ್ಮಿಕರಿಗೆ ನೀಡಿತು. 1940ರ ದಶಕದಲ್ಲಿ ಕಾರ್ಮಿಕರ ಸಂಘಟನೆಗಳಿಗೆ ಅವಕಾಶ ಸಿಕ್ಕಾಗ ಬೆಂಗಳೂರು, ಮೈಸೂರು, ದಾವಣಗೆರೆ ಇತ್ಯಾದಿ ಕಡೆ ಗಿರಣಿ ಕಾರ್ಮಿಕರು ಸಂಘಟಿತರಾದರು. ಅದರಲ್ಲಿ ಮಧ್ಯಕರ್ನಾಟಕದ ಜಿಲ್ಲೆಗಳಾದ ಶಿವಮೊಗ್ಗ, ಚಿತ್ರದುರ್ಗ, ದಾವಣಗೆರೆಗಳಲ್ಲಿ ಕಾರ್ಮಿಕರು ಸಂಘಟನೆಗಳನ್ನು ರಚಿಸಿಕೊಳ್ಳಲು ಜಾಗೃತರಾಗಿ ಕಾರ್ಯಪ್ರವೃತ್ತರಾದರು. ದಾವಣಗೆರೆಯ ಹತ್ತಿಗಿರಣಿಗಳು, ಹರಿಹರ ಕಿರ್ಲೋಸ್ಕರ್ ಕಾರ್ಖಾನೆ, ಭದ್ರಾವತಿ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ, ಎಂ.ಪಿ.ಎಂ. ಕಾಗದದ ಕಾರ್ಖಾನೆ ಇತ್ಯಾದಿ ಕಡೆಗಳಲ್ಲಿ ಕಾರ್ಮಿಕರ ಸಂಘಗಳ ರಚನೆಗೆ ಚಾಲನೆ ಸಿಕ್ಕಿತು. ವಿವಿಧ ನಾಯಕರ ನೇತೃತ್ವದಲ್ಲಿ ಕಾರ್ಮಿಕ ಸಂಘಗಳು ರಚನೆಯಾದವು.

ಕರ್ನಾಟಕದಲ್ಲಿ ಕಾರ್ಮಿಕರನ್ನು ಸಂಘಟಿಸಲು ಕೆ.ಟಿ.ಭಾಷ್ಯಂ, ಎನ್.ಡಿ. ಶಂಕರ್, ಪಿ.ಆರ್.ಕೆ. ಶರ್ಮ ಮುಂತಾದವರು ಪ್ರಾರಂಭ ಮಾಡಿದರು. ತದನಂತರ ರಾಮಶರ್ಮ, ಎಂ.ಎಸ್. ರಾಮರಾವ್ ಕಮಲಾದೇವಿ ಚಟ್ಟೋಪಾಧ್ಯಾಯ, ಎಂ.ಎಸ್. ಕೃಷ್ಣನ್, ಎಲ್.ಎನ್. ಉಪಾಧ್ಯಾಯ, ಬಿ.ವಿ. ಕಕ್ಕಿಲಾಯ, ಎಸ್. ಸೂರ್ಯನಾರಾಯಣರಾವ್ (ಕಾಂ.ಸೂರಿ), ಜಿ.ಎನ್. ನಾಗರಾಜ್, ಬಿ.ಕೆ. ಸುಂದರೇಶ್, ಮೈಕೇಲ್ ಫರ್ನಾಂಡೀಸ್, ಸಿ. ನಂಜುಂಡಪ್ಪ, ಎಂ.ಸಿ. ನರಸಿಂಹನ್, ಎಂ.ಎನ್. ಅಡ್ಯಂತಾಯ, ಎಚ್.ವಿ. ಅನಂತ ಸುಬ್ಬರಾವ್, ಪಂಪಾಪತಿ, ಶ್ರೀರಾಮುಲು, ವಾಸನ್, ವಿ.ಜಿ.ಕೆ. ನಾಯರ್, ಡಾ. ಕೆ. ರಾಧಾಕೃಷ್ಣ, ಜಾರ್ಜ್ ಫರ್ನಾಂಡೀಸ್, ಬಿ.ಆರ್.ವಿ. ರಾಜನ್ ಹಾಗೂ ಇತರರು ಪ್ರಮುಖ ಕಾರ್ಮಿಕರ ನಾಯಕರಾಗಿ ಸಂಘಟನೆಯಲ್ಲಿ ತೊಡಗಿದ್ದರು.

1959ರ ವೇಳೆಗೆ ಮೈಸೂರು ರಾಜ್ಯ ಕಾರ್ಮಿಕರಿಗೆಲ್ಲಾ ಅನ್ವಯಿಸುವ ರೀತಿಯಲ್ಲಿ ಕಮ್ಯುನಿಷ್ಟ್ ಪಕ್ಷದ ನೇತೃತ್ವದಲ್ಲಿದ್ದ ಎಐಟಿಯುಸಿ ಪ್ರಾಂತ ಸಂಘಟನೆಯನ್ನು ಕೈಗೊಂಡು 1959 ಅಕ್ಟೋಬರ್ 27 ಹಾಗೂ 28ರಂದು ಕೋಲಾರದಲ್ಲಿ 'ಮೈಸೂರು ಸಂಸ್ಥಾನ' ಟ್ರೇಡ್ ಯೂನಿಯನ್ ಕೌನ್ಸಿಲ್‌ನ ಪ್ರಥಮ ಸಮ್ಮೇಳನದಲ್ಲಿ 'ಕರ್ನಾಟಕ ಪ್ರಾಂತ ಟ್ರೇಡ್ ಯೂನಿಯನ್ ಕಾಂಗ್ರೆಸ್' ಎಂಬ ಕಾರ್ಮಿಕ ಒಕ್ಕೂಟವನ್ನು ರಚಿಸಿಕೊಳ್ಳಲಾಯಿತು. ಇದು ರಾಜ್ಯದಾದ್ಯಂತ ಕಾರ್ಮಿಕರಿಗೆ ಸಂಬಂಧಿಸಿದಂತೆ ಉದ್ಭವಿಸುವ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಹಾಗೂ ಕನ್ನಡ ಪ್ರದೇಶದ ಎಲ್ಲಾ ಕಾರ್ಮಿಕರಿಗೆ, ಮಧ್ಯಮ ವರ್ಗದ ನೌಕರರಿಗೂ ಏಕರೀತಿ ಶಾಸನಗಳು, ವೇತನಗಳು ಅನ್ವಯಿಸಬೇಕೆಂದು ಕರೆ ನೀಡಿತು. ಕಾರ್ಖಾನೆಗಳ

ಮಾಲೀಕರು ಮತ್ತು ಕಾರ್ಮಿಕರ ನಡುವಿನ ತಿಕ್ಕಾಟ ಹಾಗೂ ಸಂಘರ್ಷಗಳು ನಿರಂತರವಾಗಿದ್ದು ಬೆಂಗಳೂರು, ಮೈಸೂರು, ದಾವಣಗೆರೆ, ಹರಿಹರ, ಭದ್ರಾವತಿ, ಕೋಲಾರ, ನಂಜನಗೂಡು, ಕುದುರೆಮುಖ, ಬಳ್ಳಾರಿಗಳಲ್ಲಿ ಕಾರ್ಮಿಕರ ಪ್ರತಿಭಟನೆಗಳು ನಡೆದವು. ಕರ್ನಾಟಕದಲ್ಲಿ ಕಾರ್ಮಿಕರನ್ನು ಸಂಘಟಿಸಲು ಕಮ್ಯುನಿಷ್ಟ್ ಪಕ್ಷ, ಕಾಂಗ್ರೆಸ್ ಪಕ್ಷಗಳು ಸ್ವಾತಂತ್ರ್ಯ ಪೂರ್ವದಿಂದಲೂ ಪೈಪೋಟಿಯಲ್ಲಿ ತೊಡಗಿದ್ದವೆಂದು ತಿಳಿಯಬಹುದು. ಅದರಲ್ಲಿ ಕಮ್ಯುನಿಷ್ಟ್ ಪಕ್ಷವು ಕಾರ್ಮಿಕರ ಪಕ್ಷವಾಗಿಯೇ ಗುರುತಿಸಲ್ಪಟ್ಟಿತು. ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷದ ನೇತೃತ್ವದಲ್ಲಿ ಸ್ವಾತಂತ್ರ್ಯ ಚಳವಳಿಗಳಲ್ಲಿ ಭಾಗವಹಿಸಿದ ಅನೇಕ ನಾಯಕರು ಕಮ್ಯುನಿಷ್ಟ್ ಮತ್ತು ಸಮಾಜವಾದಿ ಚಿಂತಕರ ಪರಿಚಯವಾದ ನಂತರ ಅವರ ವಿಚಾರಗಳಿಂದ ಪ್ರಭಾವಿತರಾಗಿ ಸಂಘಟನಾ ಚಟುವಟಿಕೆಯಲ್ಲಿ ತೊಡಗಿದರು. ಅಂತಹವರಲ್ಲಿ ಎನ್.ಡಿ.ಶಂಕರ್, ಸಿ.ಬಿ. ಮೊಣ್ಣಯ್ಯ, ಎಸ್.ರಾಮಸ್ವಾಮಿ, ಕೆ.ಎಸ್.ಕುಮಾರನ್ ಎನ್.ಚೆಂಡೂರ್, ಕೆ.ಆರ್.ಶ್ರೀನಿವಾಸಮೂರ್ತಿ, ಎಂ.ಎಸ್.ರಾಮರಾವ್ ಮುಂತಾದ ವಿದ್ಯಾವಂತರು ಕಾಲಕ್ರಮೇಣ ಕಾಂಗ್ರೆಸ್‌ನ ಬಂಡವಾಳಶಾಹಿ ನೀತಿಯ ಬಗ್ಗೆ ಅನುಮಾನ ಹೊಂದಿ ಅದರಿಂದ ಪ್ರತ್ಯೇಕವಾಗಿ ಸಂಘಟನೆ ಮಾಡಿಕೊಂಡು ಸಾಮಾಜಿಕ ಸುಧಾರಣೆಗಳನ್ನು ಸಾಧಿಸಲು ಪ್ರಯತ್ನಿಸಿದರು. ಅಲ್ಲದೇ ಕಾರ್ಮಿಕರು, ರೈತರು, ವಿದ್ಯಾರ್ಥಿಗಳು ಮತ್ತು ಬುದ್ದಿಜೀವಿಗಳನ್ನು ಸಂಘಟಿಸಲು ಪ್ರಯತ್ನಿಸಿ ಯಶಸ್ವಿಯಾದರು. ಎನ್.ಎಲ್.ಉಪಾಧ್ಯಾಯ, ಎಂ.ಎಸ್. ಕೃಷ್ಣನ್‌ರವರ ನಾಯಕತ್ವದಲ್ಲಿ ಕಮ್ಯುನಿಷ್ಟರು, ಕಾರ್ಮಿಕರ ಮನೆಗಳಿಗೆ ಭೇಟಿ ನೀಡಿ ಅವರೊಂದಿಗೆ ಚರ್ಚಿಸಿ ಅವರ ಬೇಡಿಕೆಗಳು ಮತ್ತು ಕೌಟುಂಬಿಕ ಸಮಸ್ಯೆಗಳ ಪರಿಹಾರಕ್ಕೂ ಶ್ರಮಿಸುತ್ತಿದ್ದು, ಕಾರ್ಮಿಕರಿಗೆ ಕಮ್ಯುನಿಷ್ಟ್ ಪಕ್ಷ ಮತ್ತು ಅದರ ಅಧೀನದಲ್ಲಿದ್ದ ಎಐಟಿಯುಸಿ ಕಾರ್ಮಿಕರ ಸಂಘಟನೆಗೆ ಹೆಚ್ಚು ನಂಬಿಕೆ ಬೆಳೆಯಿತು. ಬಹುತೇಕ ಕಾರ್ಮಿಕ ಸಂಘಗಳು ಎಐಟಿಯುಸಿ ಅಡಿಯಲ್ಲಿ ಸಂಘಟಿತವಾಗುವುದಕ್ಕೆ ಒಲವನ್ನು ತೋರಿಸಿದವು. ಕಮ್ಯುನಿಷ್ಟರು ಕಾರ್ಮಿಕರ ಪ್ರತಿಭಟನೆಗಳನ್ನು ಸಂಘಟಿಸಿ ವೇತನ, ಬೋನಸ್, ಕೆಲಸದ ಸಮಯ, ಕಿರುಕುಳ ಮುಂತಾದ ಕಾರ್ಮಿಕರ ಸಮಸ್ಯೆಗಳಿಗೆ, ಅವರ ಶೋಷಣೆಗೆ, ಸ್ಥಾಪಿತ ಹಿತಾಸಕ್ತಿಗಳು, ವ್ಯಾಪಾರಿ ವರ್ಗಗಳ, ಬಂಡವಾಳ ಶಾಹಿಗಳ ಶೋಷಣೆಯ ಸ್ವರೂಪವೇ ಕಾರಣವಾಗಿರುವುದರಿಂದ ಅದನ್ನು ಕಿತ್ತೊಗೆಯಬೇಕು ಎಂದು ಕಾರ್ಮಿಕರನ್ನು ಒಗ್ಗೂಡಿಸಿ ಮುನ್ನಡೆಸುವ ಕಾರ್ಯವು ಕಮ್ಯುನಿಷ್ಟರ ಮಹತ್ವದ ಚಟುವಟಿಕೆಯಾಗಿದೆ.

**ಕಾರ್ಮಿಕರ ಸಂಘಟನೆಗೆ ನಿಧಿ ಸಂಗ್ರಹ**

ಕಾರ್ಮಿಕ ಸಂಘಟನೆಗಳಿಗೆ ಧನಸಹಾಯ ಮಾಡಲು ವಿವಿಧ ಮಾರ್ಗಗಳಿದ್ದು, ಸರ್ಕಾರದಿಂದ ದೊರೆಯುವ ಸಹಾಯಧನ, ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಯೋಜನೆಗಳು ಮತ್ತು ಸಂಘಟನೆಯಿಂದಲೇ ನಡೆಸುವ ಕಾರ್ಯಕ್ರಮಗಳ ಮೂಲಕ ನಿಧಿ ಸಂಗ್ರಹಣೆ ಮಾಡಲಾಗುತ್ತದೆ. ಈ ಹಣವನ್ನು ಕಾರ್ಮಿಕರ ವಿಮೆ, ಅಪಘಾತ ಪರಿಹಾರ, ವೈದ್ಯಕೀಯ ಸೌಲಭ್ಯ, ನಿರ್ಮಾಣ ಕಾರ್ಮಿಕರ ವಸತಿ ನಿರ್ಮಾಣ, ಹಾಗೂ ಇತರೆ ಸಾಮಾಜಿಕ ಭದ್ರತಾ ಯೋಜನೆಗಳಿಗಾಗಿ ಬಳಸಲಾಗುತ್ತದೆ.

**ಧನಸಂಗ್ರಹಣೆಯ ಮಾರ್ಗಗಳು**

***ಸರ್ಕಾರದ ಸಹಾಯಧನ*** : ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಕಟ್ಟಡ ಕಾರ್ಮಿಕರು, ಅಸಂಘಟಿತ ಕಾರ್ಮಿಕರು ಮುಂತಾದ ವಿವಿಧ ಬಗೆಯ ಕಾರ್ಮಿಕರ ಕಲ್ಯಾಣಕ್ಕಾಗಿ ವಸತಿ ಕಲ್ಯಾಣಕ್ಕಾಗಿ ಹಣವನ್ನು ವಿನಿಯೋಗಿಸಿ ಕಾರ್ಮಿಕರಿಗೆ ವಸತಿ ನಿರ್ಮಿಸಲು, ಅವರ ಕುಟುಂಬದವರಿಗೆ, ಶೈಕ್ಷಣಿಕ ಪ್ರೋತ್ಸಾಹ ಧನ, ಆಸ್ಪತ್ರೆ, ಹೆರಿಗೆ ಮತ್ತು ಮದುವೆಯ ಸಹಾಯಧನ ನೀಡಲಾಗುತ್ತದೆ.

***ಕಾರ್ಮಿಕರ ಕಲ್ಯಾಣ ಮಂಡಳಿ:*** ಇಂತಹ ಸಂಸ್ಥೆಗಳು ಕಾರ್ಮಿಕರ ಕಲ್ಯಾಣಕ್ಕಾಗಿ ಹಣವನ್ನು ಸಂಗ್ರಹಿಸುತ್ತವೆ. ಮತ್ತು ಅವರ ಕುಟುಂಬದವರ ಆರೋಗ್ಯ, ಶೈಕ್ಷಣಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ಧನವನ್ನು ಈ ಮಂಡಳಿಯು ನೀಡುತ್ತದೆ.

***ಸಾಮಾಜಿಕ ಭದ್ರತಾ ಮಂಡಳಿ:*** ಸಾಮಾಜಿಕ ಭದ್ರತಾ ಮಂಡಳಿಯ ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸಲು ಅಂದರೆ, ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರಿಗಾಗಿ ಕೆಲವೊಂದು ಯೋಜನೆಗಳನ್ನು ರೂಪಿಸಲಾಗಿದೆ. ಉದಾ: ಆರೋಗ್ಯ, ವಿಮೆ, ಅಪಘಾತ ಪರಿಹಾರ ಇತ್ಯಾದಿ.

***ಕಾರ್ಮಿಕರಿಂದ ವಂತಿಗೆ ಸಂಗ್ರಹಣೆ:*** ಕಾರ್ಮಿಕ ಸಂಘಟನೆಗಳು ತಮ್ಮ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗಲು ತನ್ನ ಸದಸ್ಯರಿಂದಲೇ ವಂತಿಗೆಯನ್ನು ಸಂಗ್ರಹಣೆ ಮಾಡುತ್ತದೆ. ಅದಕ್ಕಾಗಿ ಕೆಲವೊಂದು ಕಾರ್ಯಕ್ರಮಗಳನ್ನು ಆಯೋಜಿಸುತ್ತದೆ. ಉದಾ: ವಾರ್ಷಿಕ ಕ್ರೀಡಾಕೂಟ, ವೈದ್ಯಕೀಯ ತಪಾಸಣಾ ಶಿಬಿರಗಳು ಇತ್ಯಾದಿಗಳನ್ನು ನಡೆಸುವ ಮೂಲಕ ನಿಧಿಯನ್ನು ಸಂಗ್ರಹಿಸಬಹುದು.

### ಕಾರ್ಮಿಕರ ಪ್ರತಿಭಟನೆಯ ವಿಧಾನಗಳು

#### *ಅನ್ನ ಸತ್ಯಾಗ್ರಹ*

ಮಧ್ಯ ಕರ್ನಾಟಕ ಕಾರ್ಮಿಕರ ಪ್ರತಿಭಟನೆಗಳಲ್ಲಿ ದಾವಣಗೆರೆ ಪ್ರಧಾನ ಕೇಂದ್ರವಾಗಿದ್ದು ಇಲ್ಲಿನ ಕಮ್ಯುನಿಸ್ಟ್ ಪಕ್ಷಗಳು, ಕಾರ್ಮಿಕರ ಸಂಘಟನೆಗಳು ಬೇಡಿಕೆ ಈಡೇರಿಸಿಕೊಳ್ಳಲು ಹಲವಾರು ಬಗೆಯ ಪ್ರತಿಭಟನೆಗಳನ್ನು ನಡೆಸಿರುವುದು ಗುರುತಿಸಬಹುದಾಗಿದೆ. ಅದರಲ್ಲಿ ಪಂಪಾವತಿ ಹೆಚ್‌ಕೆಆರ್, ಆನಂದತೀರ್ಥ ಮುಂತಾದ ಸಮರ್ಥ ನಾಯಕರ ನೇತೃತ್ವದಲ್ಲಿ ವೇತನ ಹೆಚ್ಚಳಕ್ಕಾಗಿ, ವಜಾ ಮಾಡಿದ ಕಾರ್ಮಿಕರನ್ನು ಪುನಃ ನೇಮಿಸಿಕೊಳ್ಳಲು ಮಾಲೀಕರಿಗೆ ಒತ್ತಡ ತರಲು ಕಾಟನ್ ಮಿಲ್‌ಗಳಲ್ಲಿ, ಹರಿಹರದ ಕಿರ್ಲೋಸ್ಕರ್, ಪಾಲಿಫೈಬರ್ಸ್, ಮುಂತಾದ ಉತ್ಪಾದನಾ ಕಾರ್ಖಾನೆ ಗಿರಣಿಗಳಲ್ಲಿ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು 1970ರ ಕಾಲಘಟ್ಟದಲ್ಲಿ ಉಪವಾಸ ಸತ್ಯಾಗ್ರಹದ ಹೋರಾಟ ನಡೆಸಿ ತಮ್ಮ ಬೇಡಿಕೆ ಈಡೇರಿಸಿಕೊಂಡಿರುವುದು ಐತಿಹಾಸಿಕ ಅಂಶವಾಗಿದೆ. 1977ರಲ್ಲಿ ದಾವಣಗೆರೆಯಲ್ಲಿ 35,000 ಕಾರ್ಮಿಕರು 20–01–1977ರಲ್ಲಿ ಸಾಮೂಹಿಕ ಅನ್ನ ಸತ್ಯಾಗ್ರಹ ನಡೆಸಿರುವುದು ಕಾಣಬಹುದು. ಹಿರಿಯೂರಿನ ಸಕ್ಕರೆ ಕಾರ್ಖಾನೆ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಲು ಮಾಲೀಕರ ಮೇಲೆ ಒತ್ತಡ ತರಲು 1981 ಡಿಸೆಂಬರ್‌ನಲ್ಲಿ ನಾಲ್ಕು ದಿನ ಉಪವಾಸ ಸತ್ಯಾಗ್ರಹ ಹೋರಾಟ ನಡೆಸಿ ಅವರ ಬೇಡಿಕೆಗಳನ್ನು ಈಡೇರಿಸಲು ಪಂಪಾಪತಿಯವರು ಯಶಸ್ವಿಯಾದರು. ಜಯಲಕ್ಷ್ಮಿ ಕಾಟನ್ ಮಿಲ್‌ನಲ್ಲಿಯೂ ಬೇಡಿಕೆಗಳಿಗಾಗಿ ಧರಣಿಗಳನ್ನು ನಡೆಸಿರುವುದು ಕಾಣಬಹುದಾಗಿದೆ.

#### *ಮುಷ್ಕರ*

ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ ಜಿಲ್ಲೆಯಲ್ಲಿ ಬಹುತೇಕ ಎಲ್ಲಾ ಕಾರ್ಖಾನೆ ಗಿರಣಿಗಳಲ್ಲಿ ಕಾರ್ಮಿಕರ ಮೇಲೆ ದೌರ್ಜನ್ಯಗಳು ನಡೆದಾಗ, ಬೇಡಿಕೆಗಳನ್ನು ತಿರಸ್ಕರಿಸಿದಾಗ ಎಲ್ಲಾ ಕಾರ್ಮಿಕರು ತಿಂಗಳಾನುಗಟ್ಟಲೇ ಕಾರ್ಖಾನೆಗಳ ಬಳಿ ಕೆಲಸ ಬಿಟ್ಟು ಮುಷ್ಕರಗಳನ್ನು ನಡೆಸಿರುವುದು ಕಾಣಬಹುದಾಗಿದೆ. ಕಿರ್ಲೋಸ್ಕರ್‌ನಲ್ಲಿ ಸುಮಾರು 4 ತಿಂಗಳು ಮುಷ್ಕರ (1982 ಆಕ್ಟೋಬರ್) ನಡೆದಿರುವುದು ಮತ್ತು ಮಾಲೀಕರ ಕಾರ್ಮಿಕರ ಮಧ್ಯ ಒಪ್ಪಂದವಾಗಿ ಮುಷ್ಕರ ಹಿಂಪಡೆದಿರುವುದು ಕಾಣಬಹುದಾಗಿದೆ. ಅದರಂತೆ 1986ರಲ್ಲಿ ಸಿದ್ದೇಶ್ವರ ಮಿಲ್ ಮತ್ತು ಗಣೇಶ ಮಿಲ್‌ಗಳ ಕಾರ್ಮಿಕರು ತಮ್ಮ ಮೇಲಿನ ದೌರ್ಜನ್ಯವನ್ನು ವಿರೋಧಿಸಿ, ವೇತನ ಹೆಚ್ಚಳಕ್ಕಾಗಿ, ಕೆಲಸದಿಂದ ವಜಾ ಮಾಡಿದ ಕಾರ್ಮಿಕರನ್ನು ಪುನಃ ಸೇರಿಸಿಕೊಳ್ಳುವಂತೆ ಒತ್ತಡ ಹೇರಲು ತಮ್ಮ ಮಾಲೀಕರಾದ ಹಾಲಪ್ಪನವರ ಮನೆ ಮುಂದೆ ಮುಷ್ಕರವನ್ನು ನಡೆಸಿರುವುದು ಪ್ರಮುಖ ಘಟನೆಯಾಗಿದೆ. ಮೈಸೂರು ಕಬ್ಬಿಣ ಮತ್ತು ಉಕ್ಕು

ಕಾರ್ಖಾನೆಯಲ್ಲಿ ಸಾವಿರಾರು ಜನ ಗುತ್ತಿಗೆ ಕಾರ್ಮಿಕರನ್ನು ಖಾಯಂಗೊಳಿಸುವಂತೆ 1965–66ರಲ್ಲಿ ಬೃಹತ್ ಮುಷ್ಕರ ನಡೆಸಿರುವುದು ಗುರುತಿಸಬಹುದಾಗಿದೆ.

***ಸಾಮೂಹಿಕ ರಜೆ***

ಮೂರು ಜಿಲ್ಲೆಗಳಲ್ಲಿನ ಬಹುತೇಕ ಎಲ್ಲಾ ಕಾರ್ಖಾನೆ, ಗಿರಣಿಗಳಲ್ಲಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಡವನ್ನು ತರಲು ಅನೇಕ ಬಾರಿ ಸಾಮೂಹಿಕ ರಜೆಯನ್ನು ಬಳಸಿ ಮಾಲೀಕರು, ಸರ್ಕಾರದ ನಿಯಮಗಳನ್ನು ಪ್ರತಿಭಟಿಸುವ ವಿಧಾನವನ್ನು ಸಾಮೂಹಿಕ ರಜೆಯ ರೂಪದಲ್ಲಿ ಗುರುತಿಸಬಹುದಾಗಿದೆ. ಉದಾ: ಸಿದ್ದೇಶ್ವರ ಮಿಲ್, ಶಂಕರ ಮಿಲ್, ಕಿರ್ಲೋಸ್ಕರ್, ಪಾಲಿಪೈಬರ್ಸ್, ಜಯಲಕ್ಷ್ಮಿ ಕಾಟನ್ ಮಿಲ್, ತಾಮ್ರದ ಗಣಿಗಳಲ್ಲಿ ಕಾರ್ಮಿಕರು ವಿವಿಧ ಕಾರ್ಮಿಕರ ನಾಯಕತ್ವದಲ್ಲಿ ಸಂಘಟಿತವಾಗಿ ಉದ್ಯೋಗದಲ್ಲಿ ತಮಗಾಗುತ್ತಿರುವ ದಬ್ಬಾಳಿಕೆ, ಶೋಷಣೆಯನ್ನು ಖಂಡಿಸಿ ಅದನ್ನ ಸರಿಪಡಿಸಲು ಪ್ರಯತ್ನಿಸಲು ಎಲ್ಲಾ ಕಾರ್ಮಿಕರು ಒಂದಾಗಿ ಸಾಮೂಹಿಕ ರಜೆಯನ್ನ ಹಾಕುವ ಮೂಲಕ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಿದ್ದರು.

***ಮೆರವಣಿಗೆಗಳು:***

ಮೂರು ಜಿಲ್ಲೆಗಳಲ್ಲಿ ಬಹುತೇಕ ಎಲ್ಲಾ ಕಾರ್ಖಾನೆ ಗಿರಣಿಗಳು ಗಣಿ ಕಾರ್ಮಿಕರು ತಮ್ಮ ಸಮಸ್ಯೆಗಳನ್ನು ವಿರೋಧಿಸಿ, ಮಾಲೀಕರ ವಿರುದ್ಧ ತಮ್ಮ ಅಸಮಾಧಾನ ಹೊರಹಾಕಲು ಪ್ರತಿಭಟನೆಗಳು ಕೈಗೊಳ್ಳುತ್ತಿದ್ದರು. ಅದರ ಒಂದು ಭಾಗವಾಗಿ ತಮಗಾದ ಅನ್ಯಾಯವನ್ನು ಪ್ರತಿಭಟಿಸಲು ಸಾವಿರಾರು ಕಾರ್ಮಿಕರು ಮೆರವಣಿಗೆಗಳನ್ನು ನಡೆಸುತ್ತಾ ಘೋಷಣೆಗಳನ್ನು ಕೂಗಿ, ಮಾಲೀಕರ ವಿರುದ್ಧ ತಮ್ಮ ಅಸಮಧಾನವನ್ನು ಹೊರ ಹಾಕುತ್ತಿದ್ದರು. ಮೆರವಣಿಗೆಗಳನ್ನು ಕೈಗೊಳ್ಳುವಾಗ ಸಾಮಾನ್ಯ ಮೆರವಣಿಗೆ, ಪಂಜಿನ ಮೆರವಣಿಗೆ, ಒಂದು ಊರಿನಿಂದ ಇನ್ನೊಂದು ಊರಿಗೆ ಕಾಲ್ನಡಿಗೆಯ ಜಾಥಾ ಮಾಡುವುದು, ಕರಪತ್ರ ಹಂಚುವುದು ಇತ್ಯಾದಿ ಇದರಲ್ಲಿ ಗುರುತಿಸಬಹುದಾಗಿದೆ. ಉದಾ: ಭದ್ರಾವತಿಯ ಕಾರ್ಮಿಕರು 1950ರ ಕಾಲಘಟ್ಟದಲ್ಲಿ ಶಿವಮೊಗ್ಗವರೆಗೆ ಕಾಲ್ನಡಿಗೆ ಜಾಥ ಮಾಡಿರುವುದು, ಚಿತ್ರದುರ್ಗದಲ್ಲಿ ತಾಮ್ರಗಣಿ ಕಾರ್ಮಿಕರು 1981ರಲ್ಲಿ ಪಂಜಿನ ಮೆರವಣಿಗೆ ಮಾಡಿರುವುದು, ಹಿರಿಯೂರಿನ ವಾಣಿ ಸಕ್ಕರೆ ಕಾರ್ಖಾನೆ ಕಾರ್ಮಿಕರು 1986ರಲ್ಲಿ ಹಿರಿಯೂರಿನಿಂದ ಚಿತ್ರದುರ್ಗದವರೆಗೆ ಕಾಲ್ನಡಿಗೆಯ ಜಾಥಾ ಮಾಡಿರುವುದು ಐತಿಹಾಸಿಕ ಪ್ರತಿಭಟನೆಗಳಿಗೆ ಸಾಕ್ಷಿಯಾಗಿದೆ.

***ಪಿಕೆಟಿಂಗ್:***

ಕಾರ್ಮಿಕರು ತಮ್ಮ ಕೆಲಸವನ್ನು ಎಷ್ಟು ಕಷ್ಟವಾದರು ಹೇಗೆ ನಿರ್ವಹಿಸಿಕೊಂಡು ಹೋಗುತ್ತಾರೆಯೋ ಸಮಯ ಬಂದಾಗ ಅನ್ಯಾಯದ ವಿರುದ್ಧ ಅಷ್ಟೇ ಪ್ರಬಲವಾಗಿ ಪ್ರತಿರೋಧವನ್ನು ವ್ಯಕ್ತ ಪಡಿಸುತ್ತಾರೆ ಎಂಬ ಉದಾಹರಣೆ ಜಗತ್ತಿನ ವಿವಿಧೆಡೆಯಲ್ಲಿ ನಡೆದಿರುವ ಕಾರ್ಮಿಕ ಹೋರಾಟಗಳನ್ನು ಗುರುತಿಸಿದಾಗ ನಾವು ಗ್ರಹಿಸಬಹುದು. ಎಂತಹ ಕಠಿಣ ಸವಾಲು ಎದುರಾದರು, ಪೋಲೀಸರ ಲಾಠಿ ಚಾರ್ಜು, ಬಂಧನಗಳಿಗೆ ಹೆದರದೆ ತಾವು ಅನುಭವಿಸುವ ಕಷ್ಟಗಳಿಗೆ, ಶೋಷಣೆಗೆ ವಿರುದ್ಧವಾಗಿ ಮಾಲೀಕರ ಮೇಲೆ, ಸರ್ಕಾರದ ಪ್ರತಿನಿಧಿಗಳ ಮೇಲೆ ಕಾಲಕಾಲಕ್ಕೆ ತಮ್ಮ ಅಸಮಧಾನವನ್ನು ಹೊರಹಾಕುತ್ತಾ ಬಂದಿರುವುದನ್ನು ಗಮನಿಸಲಾಗಿದೆ. ಅದೇ ರೀತಿ ದಾಣಗೆರೆಯ ಹತ್ತಿ ಗಿರಣಿ ಕಾರ್ಮಿಕರು ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು 1986 ಅಕ್ಟೋಬರ್‌ನಲ್ಲಿ ಪಿಕೆಟಿಂಗ್ ಹೋರಾಟ ಮಾಡಿದರು. ಅಂದರೆ ಶಂಕರ್ ಮಿಲ್‌ನ ಪುನರ್ ಆರಂಭಕ್ಕಾಗಿ, ಬಾಕಿ ವೇತನ ಪಾವತಿಸಲು ಕೋರಿ, ಮಾಲೀಕರ ದಬ್ಬಾಳಿಕೆಗಳನ್ನು ಖಂಡಿಸಿ ಸಾವಿರಾರು ಕಾರ್ಮಿಕರು ನಗರದಾದ್ಯಂತ ಪಿಕೆಟಿಂಗ್ ನಡೆಸಿರುವುದು ಗುರುತಿಸಬಹುದಾಗಿದೆ. ಆ ವೇಳೆ ಮಾಲೀಕರ ಮನೆ

ಕಛೇರಿಗಳ ಮೇಲೆ ದಾಳಿ, ಸರ್ಕಾರಿ ಕಛೇರಿಗಳ ಮೇಲೆ ದಾಳಿ ಮಾಡಿ ವಸ್ತುಗಳನ್ನು, ಕಾಗದ ಪತ್ರಗಳನ್ನು ಕಿತ್ತೊಸೆದು ಅವರ ಕೆಲಸಗಳಿಗೆ ಅಡ್ಡಿಯನ್ನುಂಟು ಮಾಡಿ ಮುತ್ತಿಗೆ ಹಾಕಿದ್ದರು ಎಂದು ತಿಳಿದು ಬರುತ್ತದೆ.

***ಇತರೆ ಪ್ರತಿಭಟನೆಗಳು:***

ಇವುಗಳಲ್ಲದೆ ಮಾಲೀಕರ ದೌರ್ಜನ್ಯವನ್ನು ಖಂಡಿಸಿ, ಸರ್ಕಾರದ ನೀತಿ ಧೋರಣೆಗಳನ್ನು ವಿರೋಧಿಸಿ ಕಾರ್ಮಿಕರು ಪ್ರತಿಕೃತಿಗಳ ದಹನ ಮಾಡುವುದು (ಡಿಸಿಎಂ ಮಾಲೀಕ ಆರ್.ಆರ್. ಶ್ರೀನಿವಾಸ ಮೂರ್ತಿಯ ಪ್ರತಿಕೃತಿಯನ್ನು ಅಕ್ಟೋಬರ್ 1984ರಲ್ಲಿ ಸುಟ್ಟಿರುವುದು). 1986 ಸೆಪ್ಟಂಬರ್‌ನಲ್ಲಿ ರಾಜ್ಯ ಸರ್ಕಾರದ ಶಿಕ್ಷಣ ಮಂತ್ರಿಗಳಾದ ಮಂಜುನಾಥ್ ಡಿ, ಸಾರಿಗೆ ಮಂತ್ರಿ ವೀರಣ್ಣರನ್ನು ಘೇರಾವ್ ಮಾಡಿರುವುದು ಕಾರ್ಮಿಕರ ಪ್ರತಿಭಟನೆಗಳ ಪ್ರಬಲತೆಯನ್ನು ತಿಳಿಯಬಹುದು. ಅಲ್ಲದೆ ಹಿರಿಯೂರು ಸಕ್ಕರೆ ಕಾರ್ಖಾನೆ ಕಾರ್ಮಿಕರು ವಿವಿ ಸಾಗರದ ಪ್ರವಾಸಿ ಮಂದಿರದಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ಮಂತ್ರಿ ಜಾಲಪ್ಪರವರನ್ನು ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಡ ತಂದು ಲಾಠಿ ಚಾರ್ಜ್‌ಗೆ ಗುರಿಯಾಗಿರುವುದು, ಪ್ರತಿಭಟನೆಗಳ ವಿವಿಧ ರೂಪಗಳಾಗಿವೆ. ಇದಲ್ಲದೆ ಭದ್ರಾವತಿ ಕಾರ್ಮಿಕರು ಶಾಸಕ ಖುದ್ದೂಸ್ ಅನ್ವರ್ ಮೇಲೆ, ಘೇರಾವ್ ಮಾಡಿರುವುದು, ಅಧಿಕಾರಿಗಳ ಮೇಲೆ ದಾಳಿ ಮಾಡಿರುವುದು ಗುರುತಿಸಬಹುದು. ಅಲ್ಲದೇ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಮುಖ್ಯಮಂತ್ರಿಗಳಾದಿಯಾಗಿ, ರಾಜ್ಯಪಾಲರಿಗೆ, ಶಾಸಕರಿಗೆ, ಮಂತ್ರಿಗಳಿಗೆ ಕಾರ್ಮಿಕರು ಮನವಿ ಪತ್ರಗಳನ್ನು ಸಲ್ಲಿಸಿ ತಮ್ಮ ಸ್ಥಿತಿಗತಿಗಳನ್ನು ಸುಧಾರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು ಎಂಬುದನ್ನು ಕಾರ್ಮಿಕರ ಪ್ರತಿಭಟನೆಗಳ ವಿಧಾನಗಳನ್ನು ನೋಡಿದಾಗ ತಿಳಿಯಬಹುದಾಗಿದೆ.

**ಉಪಸಂಹಾರ**

ಮಧ್ಯ ಕರ್ನಾಟಕದ ಕಾರ್ಮಿಕರ ಸಂಘಟನೆ, ನಿಧಿ ಸಂಗ್ರಹಣೆ ಮತ್ತು ಪ್ರತಿಭಟನೆಯ ವಿಧಾನಗಳು ಕಾರ್ಮಿಕ ಚಳುವಳಿಯ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವನ್ನು ವಹಿಸಿವೆ. ಸಂಘಟಿತ ಕಾರ್ಮಿಕರ ಏಕತೆ, ಸುಸಂಘಟಿತ ನಿಧಿ ನಿರ್ವಹಣೆ ಮತ್ತು ಪ್ರಜಾಪ್ರಭುತ್ವದ ಚೌಕಟ್ಟಿನೊಳಗಿನ ಪ್ರತಿಭಟನಾ ವಿಧಾನಗಳು ಕಾರ್ಮಿಕರ ಹಕ್ಕುಗಳ ಸಾಧನೆಗೆ ಪರಿಣಾಮಕಾರಿ ಸಾಧನಗಳಾಗಿವೆ. ಕಾರ್ಮಿಕ ಸಂಘಟನೆಗಳು ಕೇವಲ ವೇತನ ಮತ್ತು ಉದ್ಯೋಗ ಭದ್ರತೆಗೆ ಸೀಮಿತವಾಗದೆ, ಸಾಮಾಜಿಕ ನ್ಯಾಯ, ಕಾರ್ಮಿಕ ಕಲ್ಯಾಣ ಹಾಗೂ ಮಾನವ ಹಕ್ಕುಗಳ ರಕ್ಷಣೆಯಲ್ಲಿಯೂ ಪ್ರಮುಖ ಕೊಡುಗೆ ನೀಡಿವೆ. ಬದಲಾಗುತ್ತಿರುವ ಆರ್ಥಿಕ ಮತ್ತು ಕೈಗಾರಿಕಾ ಪರಿಸ್ಥಿತಿಯಲ್ಲಿ ಕಾರ್ಮಿಕ ಸಂಘಟನೆಗಳು ಹೊಸ ಸವಾಲುಗಳಿಗೆ ಹೊಂದಿಕೊಳ್ಳುವ ಅಗತ್ಯವಿದೆ. ತಂತ್ರಜ್ಞಾನ, ಅಸಂಘಟಿತ ವಲಯದ ವಿಸ್ತರಣೆ ಹಾಗೂ ಗುತ್ತಿಗೆ ಕಾರ್ಮಿಕ ವ್ಯವಸ್ಥೆಯಂತಹ ಸವಾಲುಗಳ ನಡುವೆಯೂ ಸಂಘಟನೆಗಳು ತಮ್ಮ ಕಾರ್ಯತಂತ್ರವನ್ನು ಬಲಪಡಿಸಬೇಕಾಗಿದೆ. ಹೀಗಾಗಿ, ಮಧ್ಯ ಕರ್ನಾಟಕದ ಕಾರ್ಮಿಕ ಚಳುವಳಿಯ ಅನುಭವಗಳು ಕಾರ್ಮಿಕ ಹಕ್ಕುಗಳ ರಕ್ಷಣೆ, ಸಾಮಾಜಿಕ ಸಮಾನತೆ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಬಲಪಡಿಸುವಲ್ಲಿ ಮಹತ್ವದ ಪಾಠಗಳನ್ನು ನೀಡುತ್ತವೆ.

**ಪರಾಮರ್ಶನ ಗ್ರಂಥಗಳು**


- ಅಬ್ದುಲ್ ಅಜೀಜ್, (ಅನು) ಭಾಗೇಶ್ರೀ, 2010, ವಿಜಯ್ ಪೂಣಚ್ಚ ತಂಬಂಡ (ಪ್ರ.ಸಂ.) ಪೂರ್ವೋಕ್ತ, ಕಾರ್ಮಿಕ ಚಳವಳಿ ಕೆಲವು ಟಿಪ್ಪಣಿಗಳು.
- ಚಂದ್ರಶೇಖರ್, ಎಸ್. (2018). *ನಗರ ಕಾರ್ಮಿಕರ ಪಾತ್ರ.* ಕರ್ನಾಟಕ ಚರಿತ್ರೆ–7ಪ್ರೊ. ಬಿ. ಷೇಕ್ ಅಲಿ (ಪ್ರ.ಸಂ.).

- ಜಾನಕಿ ನಾಯರ್. (ಅನು) ಆರ್.ಎಲ್.ಅನಂತರಾಮಯ್ಯ. (2001). *ಕಾರ್ಮಿಕ ಚಳವಳಿ–1.* ವಿಜಯ್ ಪೂಣಚ್ಚ ತಂಬಂಡ (ಪ್ರ.ಸಂ.) ಚರಿತ್ರೆ ವಿಶ್ವಕೋಶ 4.
- ಪ್ರಕಾಶ್, ಕೆ. (2021). *ಸಮಬಾಳಿನ ಸಂಘರ್ಷ.* ಕ್ರಿಯಾ ಮಾಧ್ಯಮ.
- ಉಷಾ ರಮೇಶನಾಯಕ್. (ಲೇ.)., ವಿಜಯ್ ಪೂಣಚ್ಚ ತಂಬಂಡ (ಪ್ರ.ಸಂ.) (2010). *ಸಮಕಾಲೀನ ಕರ್ನಾಟಕ, ಕಾರ್ಮಿಕ ಚಳವಳಿ ಇತ್ತೀಚಿನ ಆಯಾಮಗಳು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.


**ವಕ್ತೃ ವಿವರ**

- ಅಬ್ದುಲ್ ರಹಮಾನ್, ಸಂದರ್ಶನ, ದಿ.13.7.2022
- ಮಾಯಣ್ಣ, ಡಿ.ಸಿ.ಸಂದರ್ಶನ, ದಿನಾಂಕ. 16.1.2023
- ಸುರೇಶ್ ಜಿ.ಸಿ. ತಂದೆ ದಿ.ಜಿ.ಚಂದ್ರಣ್ಣ, ಎಐಟಿಯುಸಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ, ಸಂದರ್ಶನ ದಿನಾಂಕ: 15.7.2021